**ಓ.ಎಸ್.ನಂ. 697/2019**

**ಪಿ.ಡಬ್ಲ್ಯು:1**

ದಿನಾಂಕಃ 10-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಜಿ ಹೆಚ್ ಕೆ ಪ್ರತಿವಾದಿ ಪರ ವಕೀಲರಿಂದಃ-**

ಸಾಕ್ಷಿಗೆ ಈಗ 2 ಪ್ರನೋಟ್ ತೋರಿಸಲಾಗಿ ಅದರಲ್ಲಿ ನಿಮ್ಮ ತಂದೆಯ ಸಹಿ ಇದೆ ಎಂದು ಕೇಳಲಾಗಿ ಸಾಕ್ಷಿಯು ಅದು ನನ್ನ ತಂದೆಯ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ಸದರಿ ಪ್ರನೋಟ್ ನ ಸಾಲ ತೀರುವಳಿಯಾದ ನಂತರ ನನ್ನ ತಂದೆ ಮತ್ತೆ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಡಿಸಿಸಿ ಬ್ಯಾಂಕ್ ನಲ್ಲಿ ಹೆಚ್ಚುವರಿ 1 ಲಕ್ಷ ಸಾಲ ಪಡೆದಿದ್ದಾರೆ ಮತ್ತು ಅದಕ್ಕೆ ನಾವು ಹೊಣೆಗಾರರು ಎಂದರೆ ಸರಿಯಲ್ಲ. ಪ್ರಸನ್ನ ರವರ ಬಳಿ ನನ್ನ ತಂದೆ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲಿ ಇದ್ದಾಗ 20 ಲಕ್ಷ ಸಾಲ ಪಡೆದ್ದಾರೆ ಹಾಗೂ ಅದನ್ನು ತೀರಿಸಲು ನಾವು ಭದ್ದರು ಎಂದರೆ ಸರಿಯಲ್ಲ.

ನನ್ನ ತಂದೆಯು ಜಗದೀಶ್, ಪ್ರಸನ್ನ, ನಂಜುಂಡಪ್ಪ ಮತ್ತು ಮಧು ರವರಿಗೆ ಪ್ರನೋಟ್ ಬರೆದು ಕೊಟ್ಟು ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆರ್ ಟೆಸಿ ಯಲ್ಲಿ ನನ್ನ ತಂದೆಯ ಹೆಸರು ಇದೆ ಎಂದರೆ ಸರಿ. ಸ.ನಂ. 4 ಮತ್ತು 5 ನನ್ನ ತಂದೆ ಮತ್ತು 1 ನೆ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ತಾತನ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಿತ ಇದ್ದಾಗ 1 ನೇ ಪ್ರತಿವಾದಿಯ ಮಗಳಿಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮೊಮ್ಮಗಳಿಗೆ ಸ್ವತ್ತನ್ನು ಬರೆದುಕೊಟ್ಟಿದ್ದರಿಂದ ನಮಗೆ ಸದರಿ ಸ್ವತ್ತಿನಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಲದ ಭಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

**2 ನೇ.ಹೆ.ಪ್ರ:ದಃನ್ಯಾ:ದಂ.,ರವರು,**
**ಕಡೂರು.**